OS.No.77/2024.

PW1.

**ಸಾಕ್ಷಿಯನ್ನು ದಿನಾಂಕಃ 17-03-2025 ರಂದು ಕರೆದು ಪ್ರಮಾಣ ಮಾಡಿಸಲಾಯಿತು.**

**<u>ಪಾಟೀ ಸವಾಲುಃ</u>** ಪ್ರತಿವಾದಿ ನಂ.1 ಮತ್ತು 2 ರವರು ಪ್ರತಿವಾದ ಪತ್ರದ ಸಲ್ಲಿಸದೆ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಪಾಟೀ ಸವಾಲು ಃ- ಪ್ರತಿವಾದಿ ನಂ. 3 ರವರ ಶ್ರೀ ಬಿ.ಆರ್.ಡಿ ಪರ ವಕೀಲರಿಂದ.</u>**

ವೆಂಕಪ್ಪ ತಟ್ಟಿಮನಿ ಇವರಿಗೆ ವಾದಿ ನಂ.2 ಹೆಂಡತಿ ಮತ್ತು ವಾದಿ ನಂ.1 ಮತ್ತು ಪ್ರತಿವಾದಿ ನಂ.1 ಇವರು ಮಕ್ಕಳು ಆಗಬೇಕು ಎಂದರೆ ಸರಿ. ಸದರಿಯವರನ್ನು ಬಿಟ್ಟು ವೆಂಕಪ್ಪ ತಟ್ಟಿಮನಿ ಇವರಿಗೆ ಬೇರೆ ಯಾರು ವಾರಸುದಾರರು ಇರುವುದಿಲ್ಲ ಎಂದರೆ ಸರಿ. ವೆಂಕಪ್ಪ ಇವರು ದಿನಾಂಕ 10.10.1993 ರಂದು ತೀರಿಕೊಂಡಿರಬಹುದು. ವೆಂಕಪ್ಪ ಇವರು ತೀರಿಕೊಂಡ ನಂತರ ವಾದಿಯರ ಮತ್ತು ಪ್ರತಿವಾದಿ ನಂ.1 ರವರ

ಹೆಸರುಗಳು ವಾರಸಾ ಪ್ರಕಾರ ಎಮ್.ಆರ್.ನಂ.71/2005-06 ದಾವಾ ಆಸ್ತಿಗಳಿಗೆ ದಾಖಲಾದವು ಎಂದರೆ ಸರಿ. 2017 ರಲ್ಲಿ ಆದ ವಾಟ್ನಿ ಪ್ರಕಾರ ವಾದಿಯರು ದಾವಾ ಆಸ್ತಿಗಳಲ್ಲಿಯ ತಮ್ಮ ಹಿಸ್ಸೆಯನ್ನು ಪ್ರತಿವಾದಿ ನಂ.1 ರವರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈ ಕುರಿತು ಎಮ್.ಆರ್.ನಂ.6/2017-18 ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. 2017 ನೇ ಸಾಲಿನಿಂದ ವಾದಿಯರು ಮತ್ತು ಪ್ರತಿವಾದಿ ನಂ.1 ರವರು ಪ್ರತ್ಯೇಕವಾಗಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ.

ತದನಂತರ ಪ್ರತಿವಾದಿ ನಂ.1 ರವರು ದಾವಾ ಆಸ್ತಿ ರಿ.ಸ.ನಂ.4/1 ನ್ನು ಪ್ರತಿವಾದಿ ನಂ.3 ರವರಿಗೆ ದಿನಾಂಕ 08.08.2018 ರಂದು ನೊಂದಾಯಿತ ಖರೀದಿ ಪತ್ರದ ಮುಖಾಂತರ ರೂ.8,47,000/- ಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಖೊಟ್ಟಿಯಾಗಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.2 ಇವಳು ಪ್ರತಿವಾದಿ ನಂ. 1 ರವರ ಹೆಂಡತಿ ಆಗಿದ್ದರಿಂದ ಅವಳು ಸಹ ಸದರಿ ಖರೀದಿ ಪತ್ರದ ಮೇಲೆ ಸಹಿ ಮಾಡಿರುತ್ತಾಳೆ ಎಂದರೆ ಸಾಕ್ಷಿಯು ಅದನ್ನು ಖೊಟ್ಟಿಯಾಗಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಮೇಲೆ ನಮೂದಿಸಿದ ಖರೀದಿ ಹಣವಾದ ರೂ.847000/- ಗಳು ಪ್ರತಿವಾದಿ ನಂ.1 ಮತ್ತು 2 ರವರಿಗೆ ಮುಟ್ಟಿರುತ್ತವೆ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರದ ಪ್ರಕಾರ ಪ್ರತಿವಾದಿ ನಂ.3 ರವರ ಹೆಸರು ದಾವಾ ಆಸ್ತಿಯ ರಿಸ ನಂ.4/1 ಕ್ಕೆ ದಾಖಲಾಗಿರುತ್ತದೆ ಎಂದರೆ ಸಾಕ್ಷಿಯು ದಾಖಲಾಗಿರುತ್ತದೆ ಆದರೆ ವಾದಿಯರೇ ಸದರಿ ಆಸ್ತಿಯ ಸ್ವಾಧೀನತೆಯಲ್ಲಿ ಇರುತ್ತಾರೆ ಮತ್ತು ಪ್ರತಿವಾದಿ ನಂ.3 ರವರು ಸದರಿ ಆಸ್ತಿಗೆ ತಮ್ಮ ಹೆಸರನ್ನು ಖೊಟ್ಟಿಯಾಗಿ ನಮೂದು ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾವೆ ಹಾಕುವುದಕ್ಕಿಂತ ಪೂರ್ವದಲ್ಲಿ ವಾದಿ ನಂ.1, 2 ಮತ್ತು ಪ್ರತಿವಾದಿ ನಂ.1, 2 ರವರು ಸದರಿ ಮೇಲೆ ನಮೂದಿಸಿದ ದಾವಾ ಆಸ್ತಿಗೆ ಪ್ರತಿವಾದಿ ನಂ.3 ರವರ ಹೆಸರು ದಾಖಲಾಗಿರುವುದನ್ನು ಪ್ರಶ್ನಿಸಿ ಕ್ರಮ ತೆಗೆದುಕೊಂಡ ಬಗ್ಗೆ ನಿಮಗೇನಾದರೂ ಮಾಹಿತಿ ಇರುತ್ತದೆಯಾ ಎಂದರೆ ಸಾಕ್ಷಿಯು 2023 ನೇ ಸಾಲಿನಲ್ಲಿ ಗೊತ್ತಾದ ನಂತರ ಈ ದಾವೆಯನ್ನು ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.3 ಈ ಮೇಲೆ ನಮೂದಿಸಿದ ದಾವಾ ಆಸ್ತಿಯಲ್ಲಿ ಪ್ರತಿವಾದಿ ನಂ.1 ಮತ್ತು 2 ರವರಿಂದ ಖರೀದಿಸಿದ ವಿಷಯ ವಾದಿಯರಿಗೆ 2017 ರಲ್ಲಿಯೇ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಈ ದಾವೆ ಹಾಕುವ ಸಮಯದಲ್ಲಿ ವಾದಿಯರಿಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇರಲಿಲ್ಲ ಎಂದರೆ ಸರಿಯಲ್ಲ. ಖರೀದಿ ಪತ್ರದ ಪ್ರಕಾರ ಪ್ರತಿವಾದಿ ನಂ.3 ರವರು ದಾವಾ ಆಸ್ತಿ ರಿ.ಸ.ನಂ.4/1 ರಲ್ಲಿ ಸ್ವಾಧೀನತೆಯಲ್ಲಿ ಇದ್ದರೂ ಸಹಿತ ನಾವು ಇರುತ್ತೇವೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.3 ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ವಾದಿಯರು ಮತ್ತು ಪ್ರತಿವಾದಿ ನಂ. 1 ಮತ್ತು 2 ಕೂಡಿಕೊಂಡು ಈ ಸುಳ್ಳು ದಾವೆಯನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ. ವಾದಿಯರು ಮತ್ತು ಪ್ರತಿವಾದಿ ನಂ.1 ರವರ ನಡುವೆ ಆದ ವಾಟ್ನಿ ಪ್ರಕಾರ ದಾವಾ ಆಸ್ತಿ ರಿ ಸ ನಂ 4/1 ಇದು

ಪ್ರತಿವಾದಿ ನಂ.1 ರವರ ಪಾಲಿಗೆ ಬಂದಿದ್ದರಿಂದ ಸದರಿ ಆಸ್ತಿಯನ್ನು ಪ್ರತಿವಾದಿ ನಂ.1 ಮತ್ತು ಅವನ ಹೆಂಡತಿಯಾದ ಪ್ರತಿವಾದಿ ನಂ.2 ರವರು ಕೂಡಿಕೊಂಡು ಪ್ರತಿವಾದಿ ನಂ.3 ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಖೊಟ್ಟಿ ದಾಖಲಾತಿಯನ್ನು ಸೃಷ್ಠಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಮುಧೋಳ.

**ಸಾಕ್ಷಿಯ ಸಹಿ:**